ಪಿಡಬ್ಲ್ಯು:1

ಸಾಕ್ಷಿಯನ್ನು ದಿ:16.10.2021 ರಂದು ಕರೆಸಲಾಯಿತು. ಪ್ರಮಾಣ ಭೋದಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ: ಫಿರ್ಯಾದುದಾರರ ಪರ ಶ್ರೀ ಜಿ ಎಂ ಎಸ್ ವಕೀಲರಿಂದ:

ನಾನು ಈ ಫಿರ್ಯಾದುನಲ್ಲಿ ಫಿರ್ಯಾದುದಾರನಾಗಿದ್ದು ನನ್ನ ಮುಖ್ಯವಿಚಾರಣೆ ಬಾಬ್ತು ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು ಅದರಲ್ಲಿ ಬರೆದಿರುವ ಒಕ್ಕಣೆಗಳನ್ನು ನಾನೇ ಹೇಳಿ ಬರೆಸಿದ್ದು ಅದರ ಸಂಗತಿಗಳು ನನಗೆ ತಿಳಿದಿರುತ್ತದೆ. ಪ್ರಮಾಣ ಪತ್ರದ ಸಂಗತಿಗಳನ್ನು ಓದಿ ತಿಳಿದುಕೊಂಡು ಅದು ಸತ್ಯವಾಗಿರುತ್ತದೆ ಎಂದು ದೃಢಿಕರಿಸಿದ್ದೇನೆ ಮತ್ತು ಪ್ರಮಾಣ ಪತ್ರದಲ್ಲಿ ಇರುವ ಸಹಿ ನನ್ನದಾಗಿರುತ್ತದೆ

ನನ್ನ ಮುಖ್ಯ ವಿಚಾರಣೆಗೆ ಪೂರಕವಾಗಿ ಈ ಕೆಳಗಿನ ದಾಖಲೆಗಳನ್ನು ಹಾಜರು ಮಾಡಿದ್ದು ಅವುಗಳನ್ನು ನೋಡಿ ಗುರುತಿಸಿದ್ದೇನೆ.

1. ಆರೋಪಿ ಸಾಲ ತಿರುವಳಿಗಾಗಿ ನೀಡಿರುವ ಚೆಕ್ ನಿಪಿ-1 ಮತ್ತು ಅದರ ಮೇಲೆ ಇರುವ ಆರೋಪಿ ಸಹಿಯನ್ನು ನಿಪಿ-1(ಎ) ಎಂದು
2. ಬ್ಯಾಂಕ್ ಚಲನ್ ನಿಪಿ-2
3. ಬ್ಯಾಂಕ್ ಹಿಂಬರಹ ನಿಪಿ-3
4. ತಿಳುವಳಿಕೆ ನೋಟೀಸ್ ನ ಕಛೇರಿ ಪ್ರತಿ ನಿಪಿ-4
5. ಅಂಚೆ ರಶೀದಿ ನಿಪಿ-5
6. ಅಂಚೆ ಸ್ವೀಕೃತಿ ಪತ್ರ ನಿಪಿ6 ಎಂದು ಗುರುತಿಸಿದ್ದೇನೆ.

ಆದ್ದರಿಂದ ಆರೋಪಿ ವಿರುದ್ಧ ಸೂಕ್ತ ಕ್ರಮ ಜರುಗಿಸಿ ನನಗೆ ಪರಿಹಾರ ದೊರಕಿಸಿಕೊಡಬೇಕೆಂದು ಕೋರಿಕೊಳ್ಳುತ್ತೇನೆ.

ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:

(ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು)

(ಉಕ್ತಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಗಣಕೀಕರಣ ಯಂತ್ರದ ಮೂಲಕ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಒ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಬೇಲೂರು.